ನಿವಿ ಅವನನ್ನು ಕಡೆಗೂ ಹೊರಡಿಸುವಲ್ಲಿ ಯಶಸ್ವಿಯಾದಳು. ಅವಳಿಗೂ ಡಾ. ರೂಪರ ಬಳಿ ತೆರಳುವ ಮನಸ್ಸಿದ್ದರೂ ಆಕೆ ಆತನ ಬಳಿ ಖಾಸಗಿಯಾಗಿ ಮಾತನಾಡುವ ಅಪೇಕ್ಷೆ ವ್ಯಕ್ತಪಡಿಸಿದ ಕಾರಣ ಆಕೆ ತನ್ನ ಉದ್ಯುಕ್ತತೆಯನ್ನು ನಿಯಂತ್ರಿಸಿಕೊಂಡಿದ್ದಳು. ಆದರೂ ಅಲ್ಲಿ ಅವರಿಬ್ಬರ ನಡುವೆ ಏನು ಮಾತುಕತೆ ಇರಬಹುದು ಅಥವಾ ಪ್ರದೀಪನ ಮನದೊಳಗೆ ಹುದುಗಿರುವ ಭಾವನೆಗಳಿಗೆ ಏನು ಕಾರಣಗಳಿರಬಹುದು ಮುಂತಾದ ಪ್ರಶ್ನೆಗಳು ಅವಳ ಮನವನ್ನೂ ಕಾಡುತ್ತಿದ್ದವು.

* * *

ಪ್ರದೀಪ ಡಾ. ರೂಪಾರ ಮುಂದೆ ಆಸೀನನಾಗಿದ್ದ. ಮತ್ತೆ ಆಪ್ತ ಸಮಾಲೋಚನೆಗೆ ಬರುವಂತಾಗಿದ್ದು, ಡಾ. ರೂಪರಿಗೆ ತನ್ನ ಮೇಲೆ ಅನುಮಾನ ಮೂಡಿದಂತೆ ಆತನಿಗೆ ಭಾಸವಾಗಿ ಅವನು ಅಸಮಾಧಾನಗೊಂಡಿದ್ದ. ಅವನು ಕುಳಿತ ಭಂಗಿಯಲ್ಲೇ ಅವನ ಅಸಹಕಾರದ ಮನೋಭಾವವನ್ನು ಗ್ರಹಿಸಿದ ಡಾ. ರೂಪಾ ಮುಗುಳ್ನಕ್ಕರು. ಇಂಥದ್ದು ಅವರಿಗೆ ಹೊಸತೇನಾಗಿರಲಿಲ್ಲ.

‘ನಿಮಗೆ ಇಲ್ಲಿ ಪುನಃ ಬರಲು ಆಸಕ್ತಿ ಇಲ್ಲವೆಂದು ನನಗೆ ಗೊತ್ತು. ನಿಮ್ಮನ್ನು ಕರೆದ ಮಾತ್ರಕ್ಕೆ ನಿಮ್ಮಲ್ಲಿ ಸಮಸ್ಯೆ ಇದೆ ಎಂದಲ್ಲ. ಇಲ್ಲಿ ಬರಲು ಮುಜುಗರ ಪಡಲು ಕಾರಣಗಳಿಲ್ಲ’ ಎಂದರು ಆತನನ್ನೇ ದೀರ್ಘವಾಗಿ ನೋಡುತ್ತ.

ಅವನು ಮತ್ತೂ ಮುಗುಮ್ಮಾಗಿಯೇ ಇದ್ದ.

‘ನೋಡಿ ಪ್ರದೀಪ್, ನಮ್ಮ ದೇಹದ ಬೆಳವಣಿಗೆಗೆ, ಶಕ್ತಿಗೆ ಅಂತ ನಾವು ಆಹಾರ ಸೇವಿಸುತ್ತೇವೆ. ದೇಹ ತನಗೆ ಎಷ್ಟು ಬೇಕೋ ಅಷ್ಟನ್ನು ಜೀರ್ಣಿಸಿಕೊಂಡು ಉಳಿದ ಕಸವನ್ನು ಹೊರಗೆ ಹಾಕುತ್ತೆ. ಆದರೆ ಮನಸ್ಸು ಇದೆಯಲ್ಲ. ನಮ್ಮ ಜೀವನದ ನಿತ್ಯದ ಆಗುಹೋಗುಗಳಲ್ಲಿ ಅಥವಾ ಕಳೆದುಹೋದ ಹಿಂದಿನ ದಿನಗಳಲ್ಲಿ ನಮಗೆ ತೀರಾ ವಿಚಲಿತಗೊಳಿಸಿದ, ಆಘಾತಗೊಳಿಸಿದ ಸಂಗತಿಗಳನ್ನು ತನ್ನ ಪದರುಗಳಲ್ಲಿ ದಮನಿತ ನೆನಪುಗಳಾಗಿ ದಾಖಲಿಸಿಕೊಳ್ಳುತ್ತವೆ. ನಿತ್ಯದ ಜೀವನದಲ್ಲಿ ಅದರ ಅಸ್ತಿತ್ವ ಕಾಣಿಸದೇ ಸಹಜವಾಗಿ ನಮ್ಮನ್ನು ಇರಿಸಿದರೂ, ಮನಸ್ಸಿನಾಳದಿಂದ ಅವು ಕೆಲವೊಮ್ಮೆ ಧುತ್ತನೇ ಹೊರ ನುಸುಳಿ ತಮ್ಮ ಅಸ್ತಿತ್ವವನ್ನು ಯಾವುದೋ ಸ್ವಭಾವದ ರೂಪದಲ್ಲಿ ಹೊರ ಚೆಲ್ಲುತ್ತವೆ. ಇದು ನಮ್ಮ ತಾಳಿಕೆಯ ಮಿತಿಯನ್ನು ದಾಟಿ ವಿಪರೀತವಾದಾಗ ಮಾತ್ರ ನಮ್ಮಂಥ ವೃತ್ತಿಪರರ ನೆರವು ಅಗತ್ಯವಾಗುತ್ತದೆ. ಅರ್ಥವಾಯಿತೇ?’ ಡಾ. ರೂಪಾ ಸರಳವಾಗಿ ಅವನಿಗೆ ಅರ್ಥವಾಗುವಂತೆ ನುಡಿದಾಗ ಪ್ರದೀಪನ ಹುಬ್ಬುಗಳ ಗಂಟು ಸಡಿಲಗೊಂಡವು. ಅವನು ನೇರವಾಗಿ ಕುಳಿತುಕೊಂಡು ಅವರ ಮಾತುಗಳಿಗೆ ಕಿವಿಗೊಟ್ಟ.

‘ಈಗ ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ನಿಮ್ಮ ಸಹಕಾರ ಇದ್ದರೆ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ. ಸೋ, ನೀವು ನಿವೇದಿತಾರನ್ನು ಮೊದಲು ನೋಡಿದ್ದು, ಮದುವೆ, ಆಕೆಯ ಸ್ವಭಾವ, ನಿಮಗೆ ಮೊನ್ನೆ ಅವರ ಮುಂದೆ ಹೇಳಲು ಸಂಕೋಚವಾಗಿ ಹೇಳಲಾಗದೇ ಇದ್ದದ್ದನ್ನು ನೀವೀಗ ಮುಕ್ತವಾಗಿ ತಿಳಿಸಿ’.

ಪ್ರದೀಪ ತನ್ನ ನೆನಪಿನ ತೆರೆಗಳಲ್ಲಿ ಈಜಾಡುತ್ತಾ ಅದನ್ನು ಅವರ ಮುಂದೆ ಹೇಳತೊಡಗಿದ.

ನನ್ನ ಗೆಳೆಯನ ತಂಗಿಯ ಮದುವೆಗೆ ಹೋದ ಸಂದರ್ಭದಲ್ಲಿ ನಾನು ನಿವಿಯನ್ನು ಮೊದಲ ಬಾರಿ ನೋಡಿದ್ದೆ. ಗಂಭೀರವಾಗಿ ಒಂದು ಮೂಲೆಯಲ್ಲಿ ಯಾರೊಡನೆಯೂ ಬೆರೆಯದೇ ಕುಳಿತಿದ್ದಳು. ಅವಳ ಗಾಂಭೀರ್ಯವೇ ನನ್ನನ್ನು ಸೆಳೆದದ್ದು. ಇಡೀ ದಿನ ಕಣ್ಣುಗಳು ಅವಳತ್ತಲೇ ಕೀಲಿಸಿ ನಿಂತಿದ್ದವು. ಅವಳು ಅಲ್ಲಿಂದ ಹೋಗುವ ತನಕವೂ ಅವಳನ್ನು ಮರೆಯಲಾಗಿರಲಿಲ್ಲ. ಅಲ್ಲಿಯ ತನಕ ಮದುವೆಯ ಕುರಿತು ಆಲೋಚನೆಯೇ ಮಾಡಿರದ ನಾನು ಮದುವೆ ಆದರೆ ಅವಳನ್ನೇ ಎನ್ನುವ ತೀರ್ಮಾನಕ್ಕೆ ಬಂದಿದ್ದೆ. ಗೆಳೆಯನ ಮೂಲಕ ಅವಳ ಮನೆಗೆ ಹೋಗಿ ನೇರವಾಗಿ ಮದುವೆ ಪ್ರಸ್ತಾಪ ಮಾಡಿದ್ದೆ. ನನ್ಗೆ ಹಿಂದೆ ಮುಂದೆ ಯಾರೂ ಇರಲಿಲ್ಲ. ಮಗಳಿಗೆ ಯಾವ ಕಿರಿಕಿರಿಯೂ ಇಲ್ಲವೆನಿಸಿತ್ತೇನೋ ಅವರಿಗೆ. ನನ್ನ ಕುರಿತು ವಿಚಾರಿಸಿ ನಂತರ ಒಪ್ಪಿಗೆ ನೀಡಿದ್ದರು. ಮದುವೆ ಸರಳವಾಗಿ ನಡೆದಿತ್ತು. ಇತ್ತೀಚೆಗೆ ಗೊತ್ತಾದದ್ದು ಏನೆಂದರೆ, ನಿವಿ ಆವರೆಗೆ ಮದುವೆಗೆ ಒಪ್ಪಿಗೆಯನ್ನೇ ನೀಡಿರಲಿಲ್ಲ. ನನ್ನ ಯಾಕೆ ಒಪ್ಪಿದಳೋ ಅರ್ಥವಾಗಲಿಲ್ಲ’.

‘ನೀವು ಮದುವೆ ಮುಂಚೆ ಮಾತನಾಡಲಿಲ್ಲವೇ, ಆಕೆಯ ಒಪ್ಪಿಗೆ ಪಡೆಯುವ ಸಲುವಾಗಿ?’

‘ಮಾತನಾಡಿಸಿದೆ’ ಎಂದು ಪುನಃ ತನ್ನ ನೆನಪುಗಳನ್ನು ಕೆದಕಿದ.

‘ನೀವು ನನ್ನ ಮನಃಪೂರ್ವಕ ಇಷ್ಟಪಟ್ಟರೆ ಮಾತ್ರ ಈ ಮದುವೆ ನಡೆಯುತ್ತೆ. ಅಪ್ಪ ಅಮ್ಮನ ಒತ್ತಾಯಕ್ಕೆ ಬೇಡ. ನಾನು ನಿಮ್ಮನ್ನು ತುಂಬಾ ಇಷ್ಟಪಡ್ತೀನಿ. ಮದ್ವೆ ಬಗ್ಗೆ ಯೋಚನೆಯೇ ಮಾಡದಿರುವ ನಾನು, ನಿಮ್ಮನ್ನು ಕಂಡ ಕ್ಷಣ ಸುಪ್ತವಾಗಿ ನಾನು ಆಸೆಪಟ್ಟ ನನ್ನ ಕನಸಿನ ಹುಡುಗಿಯ ಸಾಕಾರ ರೂಪ ನೀವು ಅನ್ನಿಸಿಬಿಟ್ಟಿತ್ತು. ನಿಮಗೆ ಒಳ್ಳೆಯ ಪತಿಗಿಂತಲೂ ಹೆಚ್ಚಾಗಿ ನಿಮ್ಮ ಸ್ನೇಹಿತನಾಗಿ ಇರ್ತೀನಿ ಅಂತ ಹೇಳ್ತೀನಿ. ಆಲೋಚನೆ ಮಾಡಿ ಉತ್ತರ ಕೊಡಿ’ ಎಂದಿದ್ದೆ. ನಿವಿ ಕಡೆಯಿಂದಲೂ ಒಪ್ಪಿಗೆ ಬಂದಿತ್ತು. ಮದುವೆ ಆದ ಮೇಲೆ ನಾವಿಬ್ಬರೂ ಚೆನ್ನಾಗಿದ್ದೆವು. ನಿವಿ ಸ್ವಲ್ಪ ಗಂಭೀರ ಹೆಣ್ಣು ಎಂದುಕೊಂಡಿದ್ದೆ. ಆದರೆ ಅವಳು ತನ್ನ ಅನಿಸಿಕೆಗಳನ್ನು, ಭಾವನೆಗಳನ್ನು ಎಷ್ಟೋ ಸಲ ಹೊರಗೆ ಹಾಕುವುದಿಲ್ಲ ಎಂದು ನನಗೆ ಅರ್ಥವಾಗಿತ್ತು. ಸಾಮಾನ್ಯವಾಗಿ ನಾನು ಏನೇ ತಂದುಕೊಟ್ಟರೂ ಆಕೆ ಯಾವ ಅನಿಸಿಕೆಯನ್ನೂ ವ್ಯಕ್ತಪಡಿಸದೆ ಅದನ್ನು ಸ್ವೀಕರಿಸುತ್ತಿದ್ದಳು. ತನಗೆ ಇಷ್ಟವಾಗಿದೆ, ಇಲ್ಲವೆಂದೂ ತಿಳಿಸುವುದಿಲ್ಲ. ನಾನೇ ಒತ್ತಾಯ ಮಾಡಿ ಕೇಳಿದರೂ ಆಕೆ, ‘ನೀವು ಆಸೆಪಟ್ಟು ತಂದಿದ್ದೀರಿ, ಚೆನ್ನಾಗೇ ಇದೆ’ ಎನ್ನುವಾಗ ನನಗೇ ಕಸಿವಿಸಿಯಾಗುತ್ತಿತ್ತು.

ಇಂಥದ್ದು ಬೇಕು, ಬೇಡ ಎಂದು ಒಂದು ದಿನವೂ ತನ್ನ ಅಭಿಪ್ರಾಯ, ಬೇಕು ಬೇಡಗಳನ್ನು ತಿಳಿಸಿದವಳಲ್ಲ. ಅಪ್ಪ ಅಮ್ಮ ಕೊಟ್ಟದ್ದನ್ನು ಒಪ್ಪಿಕೊಳ್ಳುವ ವಿಧೇಯ ಮಗಳಾಗಿದ್ದ ಅವಳಿಗೆ ಈ ಗುಣ ರಕ್ತಗತವಾಗಿತ್ತು ಎನಿಸುತ್ತದೆ. ಕೆಲವೊಮ್ಮೆ ವಿಚಿತ್ರವಾಗಿಯೂ ಕಾಣುತ್ತದೆ. ಹೆಣ್ಣುಮಕ್ಕಳಿಗೆ ಇಂಥದ್ದು ಧರಿಸಬೇಕು, ಈ ಬಣ್ಣ ಇಷ್ಟ, ಈ ಒಡವೆ ಇಷ್ಟ, ಇದು ತಿನಿಸು ಇಷ್ಟ ಹೀಗೇ ಇರಬೇಕು ಎಂದೆಲ್ಲಾ ಆಸೆಗಳು ಸಹಜ ಅಲ್ವಾ. ನನಗೆ ಒಮ್ಮೆ ಕೂಡಾ ಅವಳು ತನ್ನ ಮನಸ್ಸನ್ನು ಮುಕ್ತವಾಗಿ ತೆರೆದಿಟ್ಟವಳಲ್ಲ’.

‘ನಿಮ್ಮಿಬ್ಬರ ನಡುವೆ ಸಂಬಂಧ ಅಂದರೆ ದೈಹಿಕ ಸಂಬಂಧ ಹೇಗಿದೆ?’

ಪ್ರದೀಪ ಮೊದಲು ಸ್ವಲ್ಪ ಹಿಂಜರಿದಂತೆ ಮೌನ ಪಾಲಿಸಿದ.

‘ಈ ವಿಚಾರದಲ್ಲೂ ಆಕೆ ಮೊದಲು ಸ್ವಲ್ಪ ಮಡಿವಂತಿಕೆ ತೋರಿಸಿದಳು. ಮದುವೆಯಾಗಿ ಕೆಲ ದಿನಗಳು ನನ್ನನ್ನು ತನ್ನ ಹತ್ತಿರ ಸುಳಿಯಲು ಬಿಡಲಿಲ್ಲ. ನನಗೆ ಆಶ್ಚರ್ಯ ಆಗಿತ್ತು. ಈ ಸಂಗತಿಗಳು ನೈಸರ್ಗಿಕವಾಗಿಯೇ ಅರಿವಿರುತ್ತದಲ್ಲವೇ. ಮೊದಲು ಲಜ್ಜೆ, ಭಯ ಎಂದುಕೊಂಡೆ. ಆದಷ್ಟೂ ಅವಳ ಭರವಸೆ ಗೆಲ್ಲಲು ಯತ್ನಿಸಿದೆ. ನಂಬಿಕೆಗೆ ತೆಗೆದುಕೊಂಡೆ. ವಿಶ್ವಾಸ ಮೂಡಿಸಿದೆ. ಸುತ್ತಿ ಬಳಸಿ ಅವಳಲ್ಲಿ ಕೆಲವೊಮ್ಮೆ ಸೂಕ್ಷ್ಮವಾಗಿ ತಿಳಿಸಿದೆ. ಆಕೆ ಗೊತ್ತಿದ್ದೂ ಮುಗ್ಧಳಂತೆ ವರ್ತಿಸಿದಳೇನೋ. ನಂತರ ನನಗೆ ಸಣ್ಣಗೆ ಬೇಸರ ಮೂಡತೊಡಗಿದ ಬಳಿಕ ಒತ್ತಾಯವಾಗಿ ನನಗೆ ಮಣಿದಳು. ಆದರೂ ಅವಳು ಇವತ್ತಿಗೂ ಆ ವಿಚಾರದಲ್ಲಿ ಪೂರ್ಣ ಮನಸ್ಸಿನಿಂದ ನನ್ನೊಡನೆ ಸಹಕರಿಸುವುದಿಲ್ಲ ಎಂದೇ ನನಗೆ ಅನುಭವವಾಗುತ್ತದೆ. ನನ್ನ ಖುಷಿಗೆ, ನನಗೆ ಬೇಸರವಾಗಬಾರದೆಂಬ ಕಾರಣಕ್ಕೆ ಆಕೆ ಒಂದು ಸಹಕಾರದ ರೀತಿಯಲ್ಲಿ ಸ್ಪಂದಿಸುತ್ತಾಳೆ. ಅದು ಕೃತಕ ಎಂದು ನನಗೆ ಅರಿವಾಗುತ್ತದೆ’.

‘ನೀವು ಇದರ ಬಗ್ಗೆ ಆಕೆಯ ಬಳಿ ಮುಕ್ತವಾಗಿ ಮಾತನಾಡಿಲ್ಲವೇ?’

‘ಹೇಳಿದೆ. ಆದರೆ ಅವಳು ಆಗೆಲ್ಲಾ ಮೌನವಾಗಿಯೇ ಇದ್ದುಬಿಡುತ್ತಾಳೆ. ಅವರ ಮನೆಯವರು ಸ್ವಲ್ಪ ಸಂಪ್ರದಾಯಸ್ಥ ಹಿನ್ನೆಲೆ ಇರುವವರು. ಆಕೆ ಆ ವಾತಾವರಣದಲ್ಲಿ ಬೆಳೆದವಳಾದ ಕಾರಣ ನನ್ನೆದುರು ಸ್ವಲ್ಪ ತೆರೆದುಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ ಎನಿಸಿ ನಾನೇ ಹೊಂದಾಣಿಕೆ ಮಾಡಿಕೊಂಡೆ’ ಎಂದ.

‘ಮತ್ತೇನಾದರೂ ವಿಶೇಷವಾಗಿ ಅವರ ವರ್ತನೆ ನಿಮಗೆ ಹುಬ್ಬೇರಿಸುವಂತೆ ಮಾಡಿದ್ದು ಯಾವುದಾದರೂ ಪ್ರಸಂಗ ಇದೆಯೇ?’ ಡಾ. ರೂಪಾ ಕೆದಕುವ ಪ್ರಯತ್ನ ಮಾಡಿದರು.

ಪ್ರದೀಪ ಸ್ವಲ್ಪ ಹೊತ್ತಿನ ಮೌನದಲ್ಲಿ ತನ್ನ ನೆನಪುಗಳ ಓಣಿಯಲ್ಲಿ ಅಲೆದಾಡಿ ಬಂದವನು ನುಡಿದ, ‘ನಾನು ಫ್ಯಾಮಿಲಿ ಮ್ಯಾನ್. ನನಗೆ ನನ್ನ ಪ್ರೈವೆಸಿ ಇಷ್ಟ. ಹಾಗಾಗಿ ನಿವಿ ಸ್ವಭಾವ ನನಗೆ ಹೆಚ್ಚು ಇಷ್ಟ. ಆಕೆಯೂ ಹೊರಗೆ ಸುತ್ತಾಡುವುದಕ್ಕಿಂತ ಮನೇಲಿ ಆರಾಮಾಗಿರಲು ಇಚ್ಛಿಸುತ್ತಾಳೆ. ಅಂಥದರಲ್ಲಿ ಒಮ್ಮೆ ಅನಿವಾರ್ಯವಾಗಿ ನನ್ನ ಸ್ನೇಹಿತರು ಕೇಳಿದರು ಅಂತ ನಾನು ಮನೇಲಿ ಪಾರ್ಟಿ ಆರ್ಗನೈಸ್ ಮಾಡಿದೆ. ಸುಮಾರು ಹತ್ತು ಜನ ಇದ್ರು ಅನ್ಸುತ್ತೆ.

(ಸಶೇಷ)